# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (413) 385
ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ
(ವಿಧಾನ ಸಭೆಯಿಂದ ಚುನಾಯಿತರು)
ಉತ್ತರಿಸಬೇಕಾದ ದಿನಾಂಕ : 23-09-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸುರಿದ ಧಾರಾಕಾರ ಮಳೆ ಹಾಗೂ ಭೂ ಕುಸಿತದಿಂದಾಗಿ ಸಾವಿರಾರು ಮನೆಗಳು ಹಾನಿಗೀಡಾಗಿ ಅನೇಕ ಕುಟುಂಬಗಳು ಇಂದಿಗೂ ಅತಂತ್ರ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಕೊಡಗು ಜಿಲ್ಲೆಯಲ್ಲಿ 2018-19, 2019-20 ಮತ್ತು 2020-21 ನೇ ಸಾಲಿನ ಪ್ರಕೃತಿ ವಿಕೋಪದಲ್ಲಿ ವಾಸದ ಮನೆಗಳು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.<br><br>• 2018-19ನೇ ಸಾಲಿನಲ್ಲಿ 447 ಮನೆಗಳು ಪೂರ್ಣ/ತೀವ್ರ ಹಾನಿಯಾಗಿರುತ್ತದೆ ಹಾಗೂ 355 ಮನೆಗಳು ಅಪಾಯದ ಹಂತದಲ್ಲಿರುತ್ತದೆ. ಇದುವರೆವಿಗೂ ಒಟ್ಟು 496 ಸಂತ್ರಸ್ಥ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲಾಗಿರುತ್ತದೆ. ಬಾಕಿ ಉಳಿದ 306 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ಮನೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.<br><br>• 2019-20ನೇ ಸಾಲಿನಲ್ಲಿ ಒಟ್ಟು 2416 ಮನೆಗಳು ಹಾನಿಯಾಗಿದ್ದು, ಈ ಪೈಕಿ "ಎ" ವರ್ಗದ ಮನೆಗಳು 383, "ಬಿ" ವರ್ಗದ ಮನೆಗಳು 442, "ಸಿ" ವರ್ಗದ ಮನೆಗಳು 1591 ಹಾನಿಯಾಗಿದ್ದು, ಈಗಾಗಲೇ ವಿವಿಧ ಹಂತಗಳಲ್ಲಿ ಸಂತ್ರಸ್ಥರಿಗೆ ಮನೆ ಪುನರ್ ನಿರ್ಮಾಣ ಮಾಡಿಕೊಳ್ಳಲು ನೇರವಾಗಿ ಆರ್.ಟಿ.ಜಿ.ಎಸ್ ಮುಖಾಂತರ ಅನುದಾನ ಬಿಡುಗಡೆಮಾಡಲಾಗುತ್ತಿದೆ. ಅನಧಿಕೃತ ಜಾಗದಲ್ಲಿ ಮನೆ ನಿರ್ಮಿಸಿಕೊಂಡಿದ್ದ 168 ಕುಟುಂಬಗಳಿಗೆ ಪುನರ್ವಸತಿಗಾಗಿ ನಿವೇಶನ ಹಂಚಿಕೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ.<br><br>• 2020-21ನೇ ಸಾಲಿನಲ್ಲಿ ಇದುವರೆವಿಗೂ ಒಟ್ಟು 346 ಮನೆಗಳು ವಿವಿಧ ರೀತಿಯಲ್ಲಿ ಹಾನಿಯಾಗಿರುವ ಬಗ್ಗೆ ವರದಿಯಾಗಿದೆ. ಪ್ರಸ್ತುತ ಮಳೆ ಮುಂದುವರೆದಿರುವುದರಿಂದ ಮನೆಹಾನಿ ಸರ್ವೆ ಕಾರ್ಯ ಪ್ರಗತಿಯಲ್ಲಿದೆ. |
| ಆ | ಬಂದಿದ್ದಲ್ಲಿ, ಇದುವರೆಗೂ ಎಷ್ಟು ಕುಟುಂಬಗಳಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲಾಗಿದೆ; ಇನ್ನೂ ಎಷ್ಟು ಕುಟುಂಬಗಳು ಪುನರ್ವಸತಿ ಸೌಲಭ್ಯದಿಂದ ಇಂದಿಗೂ ವಂಚಿತವಾಗಿವೆ; (ವರ್ಷವಾರು ಮಾಹಿತಿ ನೀಡುವುದು) | |

| | | |
|---|---|---|
| ಇ | ಮನೆ ಕಳೆದುಕೊಂಡು ಇದುವರೆಗೂ ಸರ್ಕಾರದಿಂದ ಪುನರ್ವಸತಿ ಸೌಲಭ್ಯ ದೊರಕದ ಕುಟುಂಬಗಳಿಗೆ ಯಾವ ಕಾಲಮಿತಿಯೊಳಗೆ ಮನೆ ನಿರ್ಮಿಸಿಕೊಡಲಾಗುವುದು; ಈ ಸಂಬಂಧ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳೇನು; ವಿನಿಯೋಗಿಸುತ್ತಿರುವ ಅನುದಾನವೆಷ್ಟು? | 2018-19ನೇ ಸಾಲಿನ ಪ್ರಕೃತಿ ವಿಕೋಪ ಸಂತ್ರಸ್ಥರಿಗೆ ಡಿಸೆಂಬರ್-2020ರ ಅಂತ್ಯದೊಳಗೆ ಪುನರ್ವಸತಿ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.<br>2018-19ನೇ ಸಾಲಿನ ಮನೆ ಹಾನಿ ಸಂತ್ರಸ್ಥರಿಗೆ ತಲಾ ಒಂದು ಮನೆಗೆ ರೂ.9.85 ಲಕ್ಷ ವೆಚ್ಚದ ಮನೆಗಳನ್ನು ನಿರ್ಮಿಸಿ ಕೊಡಲಾಗುತ್ತಿದೆ ಹಾಗೂ 2019-20 ಮತ್ತು 2020-21ನೇ ಸಾಲಿನಲ್ಲಿ ಹಾನಿಯಾದ ಮನೆಗಳ ಪೈಕಿ "ಎ" ವರ್ಗದ ಮನೆಗೆ ರೂ.5.00 ಲಕ್ಷ, "ಬಿ" ವರ್ಗದ ಮನೆಗೆ ರೂ.5.00 ಲಕ್ಷ, "ಬಿ1" ವರ್ಗದ ಮನೆಗೆ ರೂ.3.00 ಲಕ್ಷ, "ಸಿ" ವರ್ಗದ ಮನೆಗಳಿಗೆ ರೂ.0.50 ಲಕ್ಷ ಅನುದಾನ ನೀಡಲಾಗುತ್ತಿದೆ. |

*ಕಂಇ 433 ಟಿಎನ್‌ಆರ್ 2020*

**(ಆರ್. ಅಶೋಕ)**
ಕಂದಾಯ ಸಚಿವರು